
ಆನ್‌ಲೈನ್ ಆರ್ಡರ್ ಮಾಡಕೂಡದು ಎಂದು ನನ್ನ ಪತಿಗೆ ಸ್ಟ್ರಿಕ್ಟಾಗಿ ಆರ್ಡರ್ ಮಾಡಿಬಿಟ್ಟಿದೀನಿ.

ನಮ್ಮ ಮನೆ ಕೆಲಸದವಳಂತೂ ತಲೆ ತಗ್ಗಿಸಿಯೇ ಕರೆಗಂಟೆ ಬಾರಿಸುತ್ತಾಳೆ. ಬಾಗಿಲು ತೆಗೆದ ಮೇಲೆ ತಲೆ ತಗ್ಗಿಸಿಕೊಂಡೇ ಮನೆ ಪ್ರವೇಶಿಸುತ್ತಾಳೆ. ಅಬ್ಬಾ! ಅದೆಷ್ಟು ನಯ ನಾಜೂಕು ಎಂದು ನೀವು ಅಂದುಕೊಂಡಿದ್ರೆ ನಿಮ್ಮ ಊಹೆ ಖಂಡಿತ ತಪ್ಪು. ಅವಳ ತಲೆ ಬಗ್ಗಿದ್ದು ನನ್ನ ಮೇಲಿನ ಗೌರವದಿಂದಲ್ಲ, ಅವಳ ಕೈಯಲ್ಲಿರುವ ಮೊಬೈಲ್‌ನಲ್ಲಿನ ವಿಡಿಯೊ ಮೇಲಿನ ಗೌರವದಿಂದ. ಕೈಯಲ್ಲಿರುವ ಮೊಬೈಲ್ ಕೆಳಗಿಟ್ಟ ಮೇಲಷ್ಟೇ ಅವಳಿಗೆ ನಮ್ಮ ಮನೆಗೆಲಸಕ್ಕೆ ಬಂದಿರುವುದು ನೆನಪಾಗುತ್ತೆ.

ಒಮ್ಮೆ ಪಾತ್ರೆ ತೊಳೆಯಲು, ಕಸ ಗುಡಿಸಲು ಶುರು ಮಾಡಿದ ಮೇಲೆ ಮಾತ್ರ ತಲೆ ಬಿಲ್ಕುಲ್ ಬಗ್ಗೋದಿಲ್ಲ. ಒಂದು ದಿನವಂತೂ ಬೆಳ್ಳಂಬೆಳಿಗ್ಗೆ ಬೆಲ್ ಆಯ್ತು. ಇಷ್ಟು ನಸುಕಿನಲ್ಲಿ ಯಾರಪ್ಪಾ ಬಂದ್ರು ಅಂತ ಕಿಟಕಿಯಲ್ಲಿ ನೋಡಿದೆ. ಎಂದಿನಂತೆ ಮೊಬೈಲ್‌ನಲ್ಲಿ ತಲೆ ತಗ್ಗಿಸಿ ನಿಂತಿದ್ದಳು. ಕತ್ತಲಿದ್ದರೂ ಮೊಬೈಲ್ ಬೆಳಕಲ್ಲಿ ಅವಳ ಮುಖ ಸ್ಪಷ್ಟವಾಗಿ ಕಾಣಿಸ್ತು. ಏನಿವತ್ತು ಇಷ್ಟು ಬೇಗ ಬಂದಿದ್ದಾಳೆ ಎಂದುಕೊಂಡು ಬಾಗಿಲು ತೆಗೆದೆ. ಮೊಬೈಲ್ ನೋಡ್ಕೊಂಡೇ ಒಳಗೆ ಬಂದಳು. ಯಾಕಿವತ್ತು ಇಷ್ಟು ಬೇಗ ಬಂದಿದ್ದೀಯಾ ಅಂತ ಕೇಳ್ದೆ. ನನ್ನ ಧ್ವನಿ ಕೇಳಿ ಅಚ್ಚರಿಯಿಂದ, 'ಅಯ್ಯೋ ಅಕ್ಕಾ! ನೀವ್ಯಾಕಿಲ್ಲಿ?' ಅಂದಳು. 'ನಾನು ನಮ್ಮನೇಲಿ ಇರದೇ ಮತ್ತೆಲ್ಲಿ ಇರ್ಬೇಕು?' ಅಂತ ಕೇಳ್ದೆ. 'ಅಯ್ಯೋ, ನಿಮ್ಮ ಮನೆಗೆ ಬಂದಿದೀನಾ? ಸಾರಿ ಅಕ್ಕಾ, ಪಕ್ಕದ ರೋಡ್ ಅಪಾರ್ಟ್ಮೆಂಟ್‌ನಲ್ಲಿರೋ ಅಕ್ಕಾ ಮನೆಗೆ ಹೋಗೋ ಬದಲು ತಪ್ಪಿ ನಿಮ್ಮ ಮನೆಗೆ ಬಂದ್ಬಿಟ್ಟೆವ್ನಿ. ಬಾಗಿಲು ಹಾಕೊಳ್ಳಿ, ಅವರ ಮನೆ ಕೆಲಸ ಮುಗಿಸ್ಕೊಂಡು ಆಮೇಲೆ ಬರ್ತೀವ್ನಿ. ಬೆಳಿಗ್ಗೆ ಕಾಫಿ ಕುಡೀದೆ ಬಂದರೆ ಹೀಗೇ ನೋಡಿ, ನನ್ನ ತಲೇನೆ ಓಡೋಲ್ಲ' ಅಂದ್ಳು. 'ಮೊಬೈಲ್‌ನಲ್ಲಿ ವಿಡಿಯೊ ಓಡಬೇಕಾದ್ರೆ ತಲೆ ಹೆಂಗೆ ಓಡೋಕೆ ಸಾಧ್ಯ. ಅವರ ಮನೇಲಿ ಕಾಫಿ ಕುಡಿದು ಬಾ, ಇಲ್ದಿದ್ರೆ ನಿನ್ನ ಮೊಬೈಲ್ ನಿನ್ನನ್ನ ನಮ್ಮ ಮನೆ ಬದ್ಲು ಮತ್ಯಾರೋ ಮನೆಗೆ ಕರ್ಕೊಂಡು ಹೋಗಿಬಿಟ್ಟೀತು' ಅಂತ ಕಾಲೆಳೆದೆ.

'ಹಾಗೇ ಮಾಡ್ತೀವ್ನಿ ಅಕ್ಕಾ. ನಾನು ಬರುವಷ್ಟರಲ್ಲಿ ಟೀ ಮಾಡಿಡಿ. ನಿಮ್ಮ ಮನೆ ಕೆಲಸ ಮುಗಿಸಿ, ಟೀ ಕುಡಿದು ಆಮೇಲೆ ಕೆಳಗಿನ ಫ್ಲೋರ್ ಅಕ್ಕನ ಮನೆಗೆ ಹೋಗ್ತೀವ್ನಿ. ಟೀ ಹೊಟ್ಟೇಲಿ ಬೀಳದಿದ್ರೆ ಅವರ ಮನೆ ಬದ್ಲು ಬೇರೆ ಯಾರ ಮನೆಗಾದ್ರು ಹೋಗಿಬಿಡಬಹುದು ನಾನು' ಎಂದು ನನ್ನ ಮಾತಿಗೆ ಟಕ್ಕರ್ ಕೊಟ್ಟು ಹೋದಳು.



ಮೊಬೈಲೇ ನಮ್ಮ ಮನೆ ದೇವರು ಎಂದು ಮೂರೊತ್ತು ಅದರ ದರ್ಶನದಲ್ಲಿಯೇ ಮುಳುಗುವ ಫೇಸ್ಬುಕ್ ಮಮ್ಮಿ ಹಾಗೂ ಗೂಗಲ್ ಡ್ಯಾಡಿ ಇದ್ದಾಗ ಅಂತಹ ಮನೆಯಲ್ಲಿ ಟೆಸ್ಟ್‌ಟ್ಯೂಬ್, ಅಲ್ಲಲ್ಲ ಯೂಟ್ಯೂಬ್ ಮಕ್ಕಳೇ ಹುಟ್ಟುವುದು ಕಟ್ಟಿಟ್ಟ ಬುತ್ತಿ. ಮೊಬೈಲ್ ಸ್ಮರಣೆ ಇಲ್ಲದೆ ಬಾಳಿ ಬದುಕಿದರೇನು ನರ ಜನ್ಮದಲಿ ಜನಿಸಿ ಫಲವೇನು ಹರಿಯೇ ಎನ್ನುವಂತಾಗಿದೆ ಮನುಷ್ಯನ ಜನ್ಮ.

ಹೀಗೆ ಭಕ್ತಿಯಿಂದ ಮೊಬೈಲನ್ನೇ ಪೂಜಿಸುವ, ಶ್ರದ್ಧೆಯಿಂದ ಮೊಬೈಲ್ ನಾಮವನ್ನೇ ಜಪಿಸುವ ಭಕ್ತರಿಗೆ ಪುರಂದರ ದಾಸರು ರಚಿಸಿರುವ 'ನೀನ್ಯಾಕೋ ನಿನ್ನ ಹಂಗ್ಯಾಕೋ' ಪದವನ್ನು ಈ ರೀತಿ ಬದಲಿಸಿ ಅರ್ಪಿಸಬಹುದೇನೋ.

ನೀನ್ಯಾಕೋ ನಿನ್ನ ಹಂಗ್ಯಾಕೋ ರಂಗ
ಜಂಗಮವಾಣಿಯ ಸ್ನೇಹವೊಂದಿದ್ದರೆ ಸಾಕೋ
ಜನ ಮೌನಕೆ ಸಿಲುಕಿ ಮೊರೆ ಇಡುತಿರುವಾಗ
ಸ್ನ್ಯಾಪ್‌ಚ್ಯಾಟ್ ಎಂಬ ಸಂವಹನವೇ ಕಾಯ್ತೋ
ವೈಫೈ ಕನೆಕ್ಷನ್ ಬಾಧಿಸುತಿರುವಾಗ
ಮೊಬೈಲ್ ಡೇಟಾ ಎಂಬ ಆಯ್ಕೆಯೇ ಕಾಯ್ತೋ
ದೇವರ ಭಜನೆಯಲಿ ನಿದ್ರೆಯು ಸೆಳೆವಾಗ
ಇನ್ಸ್ಟಾ ರೀಲ್ಸ್ ಎಂಬ ತಂತ್ರವೇ ಕಾಯ್ತೋ
ಸ್ನೇಹಿತರಿಲ್ಲವೆಂದು ಜನ ಕಾಲೆಳೆವಾಗ
ಫೇಸ್ಬುಕ್ ಫ್ರೆಂಡ್ಸ್ ಎಂಬ ದೊಡ್ಡ ಲಿಸ್ಟೇ ಕಾಯ್ತೋ
ಆ ಬಂಧು ಈ ಬಂಧು ಧ್ಯಾನಿಸುತಿರುವಾಗ
ವಾಟ್ಸಾಪ್ ಗ್ರೂಪ್ಸ್ ಎಂಬ ಬಂಧುವೇ ಕಾಯ್ತೋ
ಹಸುಳೆಯು ಊಟ ಬೇಡ ಎಂದಳುವಾಗ
ಕಾರ್ಟೂನ್ ಎಂಬ ಉಪಾಯವೇ ಕಾಯ್ತೋ
ನಿನ್ನ ಸಾಧನೆಗೆ ಸರಿ ಕಾಣೆನೋ ಜಗದಲಿ
ಘನ ಮಹಿಮ ಶ್ರೀ ಜಂಗಮವಾಣಿ

ಒಟ್ಟಿನಲ್ಲಿ 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವ ಹಾಗೆ 'ಮೊಬೈಲ್ ಮುಟ್ಟದ ಕೈಗಳಿಲ್ಲ, ಮೊಬೈಲ್‌ಗೆ ಬಗ್ಗದ ತಲೆಗಳಿಲ್ಲ' ಎನ್ನಬಹುದು.

**ಪ್ರತಿಕ್ರಿಯಿಸಿ: feedback@sudha.co.in**